ತುಮಕೂರಿನ ಡಾ. ಪ್ರೇಮಲತಾ ಬಿ. ಸದ್ಯ ಇಂಗ್ಲೆಂಡ್ ನಿವಾಸಿ. ದಂತವೈದ್ಯೆ. ಇಂಗ್ಲೆಂಡ್‌ನ ಕನ್ನಡ ಕೂಟಗಳಲ್ಲಿ ಸಕ್ರಿಯರು. 'ಐದು ಬೆರಳುಗಳು' ಅವರ ಕಥಾಸಂಕಲನ.

ಎಂದು ಒಳಗೆಲ್ಲೋ ಒಂದು ನಂಬಿಕೆಯೂ ಅವನಲ್ಲಿ ಮನೆಮಾಡಿಕೊಂಡಿತ್ತು. ಹಾಗೆಂದೇ ಅವನಿಗೆ ಗೀತಾಳ ಮೇಲೆ ಪ್ರೀತಿ ಮತ್ತು ಜೊತೆ ಜೊತೆಗೆ ಯಾವುದೋ ಒಂದು ರೀತಿಯ ಗೌರವವೂ ಸೇರಿಕೊಂಡಿತ್ತು. ದುಡಿದು ತಂದು ಸಂಬಳವನ್ನು ಅವಳ ಕೈಗೆ ಹಾಕಿ ನೆಮ್ಮದಿಯಾಗಿ ಇರುವುದನ್ನು ಕಲಿತುಬಿಟ್ಟಿದ್ದ.

ಮನೆ-ಮಡದಿಯಾದರೂ ಗೀತಾ ಪೇಪರುಗಳನ್ನು ಓದಿ, ನ್ಯೂಸ್‌ಗಳನ್ನು ನೋಡಿ ಕೊಡುತ್ತಿದ್ದ ವಿಶ್ಲೇಷಣೆಗಳು ಕೆಲವೊಮ್ಮೆ ಮೂರ್ತಿಯನ್ನು ದಂಗು ಬಡಿಸುತ್ತಿದವು. ಅವಳು ಯಾವುದನ್ನೂ ಮುಖಬೆಲೆಯ ಲೆಕ್ಕಕ್ಕೆ ನೋಡುತ್ತಿರಲಿಲ್ಲ. ಕೆಲವೊಮ್ಮೆ ವಿತ್ತಂಡವಾದಕ್ಕೆ ಇಳಿಯುತ್ತಿದ್ದ ಹೆಂಡತಿಯ ವರಸೆಗೆ ಮೂರ್ತಿ ದಂಗಾಗುತ್ತಿದ್ದ. ಬೇರೆ ಇನ್ನೆಲ್ಲೋ ಇತರೆ ಜಾಣರು ಅದನ್ನೇ ಹೇಳುವುದನ್ನು ಕೇಳಿದಾಗ ಹೆಂಡತಿಯ ಬಗ್ಗೆ ಅವನಿಗೆ ಪರಮಾಶ್ಚರ್ಯವಾಗುತ್ತಿತ್ತು.

ಮೂರ್ತಿಗೆ ಕೋಪ ಬಂದಾಗ ಹೆಂಡತಿಯ ಎದುರು ಗೊಣಗಾಡಿ, ರೇಗಾಡಿ, ಪೇಚಾಡಿಕೊಂಡರೂ ಅದಕ್ಕಿಂತ ಹೆಚ್ಚಾಗಿ ಇನ್ನೇನೂ ಮಾಡಲಾಗುತ್ತಿರಲಿಲ್ಲ. ಜೊಳ್ಳು ಜೊಳ್ಳಾಗಿ ಆಗೀಗ ಜೋರು ಹೊಡೆಯುತ್ತ ಏನೇನೋ ಅಸಂಬದ್ಧ ಕೂಗಾಡುತ್ತಿದ್ದ. ಅದನ್ನೆಲ್ಲ ಗೀತಾ ಸುಮ್ಮನೆ ಕೇಳಿಸಿಕೊಳ್ಳುತ್ತಿದ್ದಳು. ಅವನು ಸುಮ್ಮನಾದ ಮೇಲೆ ಗೀತಾ ತರಾಟೆಗೆ ತೆಗೆದುಕೊಳ್ಳುತ್ತಿದ್ದಳು. ಆಗ ಮೂರ್ತಿಗೇ ತಾನು ಹೇಳಿದ್ದು, ಯೋಚಿಸುತ್ತಿದ್ದುದು ಸರಿಯಿಲ್ಲ ಎನಿಸಿಬಿಡುತ್ತಿತ್ತು. ಹೆಂಡತಿಗೆ ತನ್ನ ಅಧೈರ್ಯ ವೇದ್ಯವಾಗಬಾರದು ಎಂದು ಏನೇನೋ ಮಾಡಲು ಹೋಗುತ್ತಿದ್ದ. ಅದಕ್ಕೆಲ್ಲ ಗೀತಾ ತಣ್ಣಗಿನ ಪ್ರತಿರೋಧ ತೋರಿಸಿ ಸುಮ್ಮನಿರುವುದನ್ನು ಕಲಿತಿದ್ದಳು. ಯಾರಾದರೂ ಬಡವರು ಅಥವಾ ದುರ್ಬಲರನ್ನು ಕಂಡರೆ ಮೂರ್ತಿಯ ದರ್ಪಗಳು ಹೆಚ್ಚಾಗುತ್ತಿದ್ದವು. ಆಗೆಲ್ಲ ಗೀತಾ ತನ್ನೆಡೆಗೆ ಕೆಕ್ಕರಿಸಿ ನೋಡಿ ಸಂತಾಪ ವ್ಯಕ್ತಪಡಿಸುವ ಮುಖ ಮಾಡಿದರೆ ಅವನ ಮರ್ಮಕ್ಕೆ ಚುರುಕ್ಕೆನಿಸಿ ಸರಿಯಾಗಿ ಬಿಡುತ್ತಿದ್ದ.

ಆದರೆ, ಅಪರೂಪಕ್ಕೆ ಯಾರ ಮೇಲಾದರೂ ರೇಗಿದಾಗ ಮಾತ್ರ ಗೀತಾ ರೌದ್ರಾವತಾರವನ್ನು ತಾಳುತ್ತಿದ್ದಳು. ಆಗ ಮೂರ್ತಿ ಮಾತು ಮರೆತು ಕಣ್ಣು-ಬಾಯಿ ಬಿಟ್ಟುಕೊಂಡು ಹೆಂಡತಿಯನ್ನೆ ನೋಡುತ್ತಿರುತ್ತಿದ್ದ. ಅವಳು ಕನಲಿದಂತೆಲ್ಲ ಸಿನಿಮಾದಲ್ಲಿ ಹೀರೋಗಳು ರೌಡಿಗಳನ್ನು ಚಚ್ಚುವಾಗ 'ಹೊಡಿ... ಬಾರ್ಸು... ಬಿಡಬೇಡ' ಎಂದು ಸೀಟಲ್ಲೆ ಕೂತು ಮಿಸುಕಿ, ಸಿಳ್ಳೆ ಹೊಡೆವ ಪ್ರೇಕ್ಷಕನಂತಾಗುತ್ತಿದ್ದ.

## 3

ನಿಜ ದೃಶ್ಯವನ್ನು ನೋಡಿದಾಗ ಮೂರ್ತಿಯ ಎದೆ ಧಸಕ್ಕೆಂದಿತು.

ಮದುವೆಗೆ ಬಂದಿದ್ದ ಹಣದ ಮುಯ್ಯಿಗಳು, ಮೂರ್ತಿ ಅವನ ಅಣ್ಣನೊಂದಿಗೆ ಪಾಲಾದಾಗ ಸಿಕ್ಕ ಸ್ವಲ್ಪ ಹಣ, ಬ್ಯಾಂಕಿನ ಸಾಲ ಎಲ್ಲ ಸೇರಿಸಿ ಕೊಂಡಿದ್ದ ಅವರ ಮೊಟ್ಟ ಮೊದಲ ಮತ್ತು ಕೊನೆಯ ಆಸ್ತಿ ಆ ಸೈಟಾಗಿತ್ತು. ಅದರಲ್ಲೂ ಅದು ದಕ್ಷಿಣಕ್ಕೆ ಮುಖಮಾಡಿದ್ದ ಜಾಗ. ಅದರಿಂದ ಮುಂದಕ್ಕೆ ಸ್ಮಶಾನ. ಅದಕ್ಕೆಂದೇ ಅವರಿಗೆ ಅದು ಅಗ್ಗವಾಗಿ ದೊರಕಿತ್ತು. ವಾಸ್ತುವಿನಲ್ಲಿ ತನಗೆ ನಂಬಿಕೆಯಿಲ್ಲ ಎಂದ ಗೀತಾ, ಸ್ಮಶಾನ ನಮಗೆ ಒಳ್ಳೆಯ ನಿಶಾನೆ ಎಂದಿದ್ದಳು. ಮೂರು ಲಕ್ಷಕ್ಕೆ ಕೊಂಡದ್ದು ಈಗ ಕೋಟಿಗೆ ಹೋಗುತ್ತದೆ ಎಂದು ನಂಬಿದ್ದರು. ಮಗಳ ಮದುವೆಗೆ ಮತ್ತು ಭವಿಷ್ಯಕ್ಕೆ ಎಂದು ಜತನವಾಗಿ ಕಾಯ್ದುಕೊಂಡು ಬಂದಿದ್ದ ಆಸ್ತಿಯದು. ಬೇರೆ ಊರಿನಲ್ಲಿ ಮೂರ್ತಿಯ ಕೆಲಸವಿದ್ದುದರಿಂದ ಮಗಳ ಮದುವೆಯ ನಂತರ ಇಲ್ಲಿಯೇ ಮನೆ ಕಟ್ಟಿಸಬೇಕೆಂದುಕೊಂಡಿದ್ದರು.

ಆದರೆ, ಯಾರೋ ಬಂದು ಅದರ ಮಧ್ಯದಲ್ಲಿ ಇಟ್ಟಿಗೆಯ ಶೆಡ್ ಹಾಕಿದ್ದರು. ಜಲ್ಲಿ, ಕಲ್ಲು, ಮರಳು ಕಲ್ಲುಗಳು ಎಲ್ಲವೂ ರಾಶಿ, ರಾಶಿಯಾಗಿ ಬಂದು ಬಿದ್ದಿದ್ದವು. ಅದನ್ನು ನೋಡಿದ ಮೂರ್ತಿಗೆ ಯಾರೋ ತಮ್ಮ ಮೇಲೆ ಅತಿಕ್ರಮಣ ಮಾಡಿದಂತೆ ತೋರಿತು. ಹಿಂದಿನ ಸೈಟಿನಲ್ಲಿ ಏಳುತ್ತಿದ್ದ ಹತ್ತು ಮನೆಗಳ,